ಈ ಸಂದರ್ಭದಲ್ಲಿ ಸ್ವಾಮೀಜಿ ಅಮೆರಿಕದ ಅನೇಕ ನಗರಗಳಲ್ಲಿ ಉಪನ್ಯಾಸಗಳನ್ನು ಮಾಡಿದರು. ೧೯೦೦ರ ಸೆಪ್ಟೆಂಬರ್‌ನಲ್ಲಿ ಪ್ಯಾರಿಸ್‌ನಲ್ಲಿ ನಡೆಯಲಿದ್ದ ಧರ್ಮಗಳ ಇತಿಹಾಸ ಸಮ್ಮೇಳನದಲ್ಲಿ ಭಾಗವಹಿಸಲು ತೆರಳಿದರು. ಎಲ್ಲಿ ಹೋದರೂ ಸ್ವಾಮೀಜಿ ಜನರನ್ನು ಸ್ಫೂರ್ತಿಗೊಳಿಸುತ್ತಿದ್ದರು. ಸತತ ಪ್ರಯಾಣ ಮತ್ತು ಉಪನ್ಯಾಸಗಳಿಂದ ಸ್ವಾಮೀಜಿ ಬಳಲಿದರು. ತಾಯ್ನಾಡಿಗೆ ಮರಳಲು ಬಯಸಿದರು. ಮುಂಬೈಯವರೆಗೆ ಹಡಗಿನಲ್ಲಿ ಬಂದು, ನಂತರ ಪ್ರಯಾಣ ಮಾಡಿ, ೧೯೦೦ರ ಡಿಸೆಂಬರ್ ತಿಂಗಳ ಒಂದು ದಿನ ಬೇಲೂರು ಮಠವನ್ನು ತಲುಪಿದರು.

